ಹೋಗಬೇಕಾಗಿದೆ ಮತ್ತು ಮಾನ್ಯ ಮುಖ್ಯಮಂತ್ರಿಗಳು ಹೋಗಬೇಕಾಗಿದೆ. ಅವರು ಇನ್ನೊಂದು ಕಾರ್ಯಕ್ರಮದಿಂದ ಇಲ್ಲಿಗೆ ಬರುವುದು ತಡವಾಯಿತು. ಇವತ್ತು ಸಭೆಯನ್ನು ಬೇರೆ ಅನಿರ್ದಿಷ್ಟಕಾಲ ಮುಂದಕ್ಕೆ ಹಾಕುತ್ತಿದ್ದೇವೆ. ಅವರು ಹೇಳಿಕೆ ಮಾಡಬೇಕಾಗಿದೆ.

ಶ್ರೀ ಕೆ. ಎನ್. ಗದ್ದಿ :- ಅಲ್ಲಿ ಸತ್ಯಾಗ್ರಹ ನಡೆಯುತ್ತಿದೆ.....

ಅಧ್ಯಕ್ಷರು :- ನೀವು ನನ್ನನ್ನು ಭೇಟಿಯಾದಾಗ ಆಗಲೇ ಇದರ ಬಗ್ಗೆ ಹೇಳಿದ್ದೀರಲ್ಲಾ ನೀವು, ಯಾವಗಲ್‌ಅವರು ಶ್ರೀಶೈಲಪ್ಪ ಇವರುಗಳು ಕಳುಹಿಸಿರುವ ನೋಟೀಸ್ ಎಲ್ಲಾ ನಾನು ಓದಿದ್ದೇನೆ. ಸತ್ಯಾಗ್ರಹ ನಿಲ್ಲಿಸೋಣ : ನಿಮಗೇಕೆ ತಾವು ಕುಳಿತುಕೊಳ್ಳಿ.

ಶ್ರೀ ಕಲ್ಲಪ್ಪ ನಾಗಪ್ಪ ಗದ್ದಿ :- ಅಲ್ಲಿ ದಿನವೂ ಸರಿಯಾಗಿ ನೀರನ್ನು ಬಿಡುತ್ತಿಲ್ಲ. ಜನರಿಗೆ ತೊಂದರೆಯಾಗಿದೆ. ತಾವು ದಯಮಾಡಿ ಇದನ್ನು ನೋಡಬೇಕೆಂದು ತಮ್ಮ ಗಮನಕ್ಕೂ ಮತ್ತು ಸಭಾನಾಯಕರ ಗಮನಕ್ಕೂ ತರುತ್ತಿದ್ದೇನೆ.

ಅಧ್ಯಕ್ಷರು :- ಆಯಿತು. ನಾನು ನಿಮ್ಮ ಪರವಾಗಿ ಅವರ ಗಮನಕ್ಕೆ ತರುತ್ತೇನೆ.

ಶ್ರೀ ಬಿ. ಆರ್. ಯಾವಗಲ್ :- ಮಾನ್ಯ ಅಧ್ಯಕ್ಷರೇ, ಅವರು ಹೇಳುತ್ತಿರುವುದು ಸೂಕ್ತವಾಗಿದೆ.

ಅಧ್ಯಕ್ಷರು :- ಕರೆಕ್ಟೇ ಯಾವಗಲ್‌ರವರೇ, ಈಗ 4-10 ಆಗಿದೆ. ಮಾನ್ಯ ರಾಷ್ಟ್ರಪತಿಗಳ ಕಾರ್ಯಕ್ರಮ ಇದೆ. ನಾಲ್ಕೂವರೆಗೆ ಅವರು ನಾವು ಎಲ್ಲಾ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿದೆ.

ಶ್ರೀ ಬಿ. ಆರ್. ಯಾವಗಲ್ :- ನಾನು ತಮ್ಮ ಸಮಯವನ್ನು ಹಾಳುಮಾಡಬೇಕೆಂದು ಇಲ್ಲ. ಆದರೆ ಅದಕ್ಕೆ ದಯವಿಟ್ಟು ಮುಖ್ಯಮಂತ್ರಿಗಳು ಅದರ ಬಗ್ಗೆ ಇನ್ಸ್‌ಟ್ರಕ್ಷನ್ ಕೊಡಬೇಕಾಗಿದೆ. ಅಲ್ಲಿ ಏನಾಗಿದೆ ಎಂದರೆ ಸುತ್ತಮುತ್ತ ಮಳೆಯಾಗಿ ಟೈಲ್‌ಎಂಡ್‌ನಲ್ಲಿರುವ ಹತ್ತಾರು ಹಳ್ಳಿಗಳಿಗೆ ಎರಡು ಬ್ಲಾಕ್‌ಗಳಲ್ಲಿ ಮಳೆಯೂ ಇಲ್ಲ. ನೀರೂ ಇಲ್ಲ. ಅಲ್ಲಿ ಸತ್ಯಾಗ್ರಹವನ್ನು ಪ್ರಾರಂಭಮಾಡಿದ್ದಾರೆ. ಅಲ್ಲಿ ಯಾವುದೇ ಒಂದು ವ್ಯವಸ್ಥೆಯಾಗದಿದ್ದರೆ ಬಹಳ ತೊಂದರೆಯಾಗುತ್ತದೆ ಎಂದು ಹೇಳುತ್ತೇನೆ.

MR. SPEAKER :- I will request the Hon'ble Chief Minister to direct his officials to immediately to look into that matter. There is no problem.

ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣದ ಬಗ್ಗೆ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :- ಮಾನ್ಯ ಸಭಾಧ್ಯಕ್ಷರೇ, ಈಗತಾನೆ ನಮ್ಮ ಸ್ನೇಹಿತರಾದ ಜಿ. ಬಿ. ಶಿವಕುಮಾರ್ ರವರು ನಮ್ಮ ಮಂಡ್ಯ ಜಿಲ್ಲೆ ರೈತರು ಈ ನಮ್ಮ ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣದ ಬಗ್ಗೆ ಕೆಲವು ವಿಚಾರಗಳ ಬಗ್ಗೆ ಅನುಮಾನವನ್ನು ವ್ಯಕ್ತಪಡಿಸಿದ್ದಾರೆ. ಅದರ ಬಗ್ಗೆ ಮುಖ್ಯಮಂತ್ರಿಗಳ ಗಮನವನ್ನು ಸೆಳೆದಿದ್ದಾರೆ. ನಾನೂ ಸಹ ಈ ವಿಚಾರದಲ್ಲಿ ಮಾತನಾಡಲೂ ಸಹಿಯನ್ನು ಹಾಕಿದ್ದೇನೆ. 27-3-79 ರಲ್ಲಿ ಈ ವರುಣಾ

ನಾಲೆಯ ಬಗ್ಗೆ ಚಳುವಳಿ ನಡೆದಾಗ ಸರ್ಕಾರಕ್ಕೂ ಮತ್ತು ಮಂಡ್ಯ ಜಿಲ್ಲೆಯ ರೈತರಿಗೂ ಒಪ್ಪಂದವಾಗಿದೆ. ಬಲದಂಡೆ ನಾಲೆಯಲ್ಲಿ ಶಿಂಷಾ ನದಿಯ ಅಚ್ಚುಕಟ್ಟಿನಲ್ಲಿ ಸುಮಾರು 60 ಸಾವಿರ ಎಕರೆ ಕಬ್ಬು ಬೆಳೆಯುವಂಥ ರೈತರಿದ್ದಾರೆ. ಮತ್ತು ಒಂದು ಲಕ್ಷ ಮೂವತ್ತೊಂದು ಸಾವಿರ ಎಕರೆ ಭತ್ತವನ್ನು ಬೆಳೆಯತಕ್ಕಂಥ ರೈತರು ಇದ್ದಾರೆ. ಆದೇ ರೀತಿ ವರುಣಾ ನಾಲೆಗೆ ಸಂಬಂಧಪಟ್ಟಂಥ ರೈತರು ಅವರು ಎಂಭತ್ತು ಸಾವಿರ ಎಕರೆಗೆ ಲಿಮಿಟ್‌ಆಗಿ ಮಾಡಬೇಕು. ಸೆಮಿ ಡ್ರೈ ಕ್ರಾಪ್ ಎಂದು ಹೇಳಿ ಮತ್ತೆ ನಮ್ಮ ಟೈಲ್‌ಎಂಡ್ ಪ್ರದೇಶ ಏನಿದೆ, ನಮ್ಮ ಮಳವಳ್ಳಿ, ಕಿರುಗಾವಲು ಮತ್ತು ಮದ್ದೂರು ಈ ಪ್ರದೇಶಗಳಲ್ಲಿ ಹಿಂದೆ ಸುಮಾರು ಹತ್ತು ಸಾವಿರ ಎಕರೆ ಸಫರಿಂಗ್ ಅಚ್ಚುಕಟ್ಟು ಎಂದು ಏನಿದೆ, ಅದಕ್ಕೆ ಈ ನೀರನ್ನು ಕೊಡಬೇಕು ಎಂದು ಹೇಳಿ ಒಪ್ಪಂದವಾಗಿತ್ತು. ಆದರೆ ಆ ಬಗ್ಗೆ ಇನ್ನೂ ಏನು ಕ್ರಮ ತೆಗೆದುಕೊಂಡಿಲ್ಲ. ಆದರಿಂದ ಇವತ್ತೇನು ತಜ್ಞರ ಸಮಿತಿಯೇನು ವರದಿಯನ್ನು ಕೊಟ್ಟಿದ್ದಾರೆ, ಐ.ಎಂ. ಮುಗ್ಧಂ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿ ಅವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯ ಪ್ರಕಾರ ನಮ್ಮ ಸರ್ಕಾರ ತಾಂತ್ರಿಕ ಎಲ್ಲಾ ವಿಚಾರಗಳನ್ನು ಪರಿಶೀಲನೆ ಮಾಡಿ ತಾಂತ್ರಿಕ ಸಮಿತಿಗೆ ಈ ಒಂದು ವಿಚಾರವನ್ನು ಒಪ್ಪಿಸಿ ನಮ್ಮ ರೈತರಲ್ಲಿ ಮೂಡಿರುವ ಕಳವಳವನ್ನು ನಿವಾರಣೆ ಮಾಡಬೇಕೆಂದು ನಾನು ತಮ್ಮ ಮೂಲಕ ಮುಖ್ಯಮಂತ್ರಿಗಳನ್ನು ನಾನು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ. ಈಗಾಗಲೇ ಮುಖ್ಯಮಂತ್ರಿಗಳು ನಮ್ಮ ಪ್ರದೇಶದ ರೈತರಿಗೆ ಒಂದು ವಿಶ್ವಾಸವನ್ನು ಮೂಡಿಸಿದ್ದಾರೆ. ಅನೇಕ ವರ್ಷಗಳಿಂದ ಏನು ಈ ಆಧುನೀಕರಣದ ಕೆಲಸ ನಿಂತಿತ್ತು, ಎಷ್ಟು ಹಣ ಕೊಟ್ಟಿದ್ದರು, ನಮ್ಮ ಸರ್ಕಾರ ಬಂದಮೇಲೆ ನಮ್ಮ ಮುಖ್ಯಮಂತ್ರಿಗಳು ನಮ್ಮ ಭಾಗದ ರೈತರಿಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆ ಎಂದು ಅದನ್ನು ನೋಡಿಕೊಂಡರೆ ಇವತ್ತು ನಮ್ಮ ಪ್ರದೇಶದ ರೈತರಿಗೆ ಬಹಳ ತೃಪ್ತಿ ಇದೆ. ನಮ್ಮ ಮುಖ್ಯಮಂತ್ರಿಗಳು ನಮ್ಮ ಪ್ರದೇಶದ ರೈತರಿಗೆ ಒಳ್ಳೆಯದನ್ನು ಮಾಡುತ್ತಿದ್ದಾರೆ. ಹೆಚ್ಚಿಗೆ ಹಣವನ್ನು ಒದಗಿಸಿಕೊಟ್ಟಿದ್ದಾರೆ ಎನ್ನುವ ಭರವಸೆ ಕೂಡ ಇದೆ. ಆದೇ ಒಂದು ದಿಕ್ಕಿನಲ್ಲಿ ಈ ಒಂದು ವಿಚಾರವನ್ನು ತಾಂತ್ರಿಕ ಸಮಿತಿಗೆ ವಹಿಸಿ ಆ ರೈತರಲ್ಲಿ ಇರುವ ಅನುಮಾನವನ್ನು ನಿವಾರಣೆ ಮಾಡಬೇಕೆಂದು ಹೇಳಿ ನಾನು ತಮ್ಮ ಮುಖಾಂತರ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

+ **ಶ್ರೀಮತಿ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ** (ಶ್ರೀ ರಂಗಪಟ್ಟಣ) :- ಮಾನ್ಯ ಸಭಾಧ್ಯಕ್ಷರೇ, ಕೆಆರ್‌ಎಸ್‌ನಿಂದ ನಾವು ವರುಣಾನಾಲೆಗೆ ನೀರನ್ನು ಕೊಡಬೇಕೆಂದು ಹೇಳಿದ್ದೇವೆ. ಆದರಲ್ಲಿ ಏನು ನನ್ನದು ಎರಡನೇ ಮಾತಿಲ್ಲ. ಇದರಲ್ಲಿ ನಮ್ಮದೂ ಕೂಡ ಎಂಟುಸಾವಿರ ಎಕರೆ ಆಗುತ್ತಿರುವುದು ತುಂಬಾ ಸಂತೋಷ. ಆದರ ಜೊತೆಗೆ ತಾಂತ್ರಿಕ ಸಮಿತಿಗೆ ವಹಿಸಬೇಕೆಂದು ಮಾನ್ಯ ಸದ್ಯಸರು ಸಲಹೆ ಮಾಡಿದ್ದಾರೆ. ಆದರ ಬಗ್ಗೆ ಕೂಡ ತಾವು ಸರಿಯಾಗಿ ಹೇಳಿಕೆಯನ್ನು ಕೊಡಬೇಕೆಂದು ಹೇಳುತ್ತೇನೆ. ನಮ್ಮ ಮಂಡ್ಯದ ಜನತೆ ಇದನ್ನೆ ನಮಗೆ ಕೇಳುತ್ತಿದ್ದಾರೆ. ಮುಖ್ಯಮಂತ್ರಿಗಳು ತಮ್ಮ ಹೇಳಿಕೆಯನ್ನು ನೀಡಬೇಕೆಂದು ಹೇಳಿ ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

+ **ಶ್ರೀ ಹೆಚ್. ಡಿ ದೇವೇಗೌಡ (ಮುಖ್ಯಮಂತ್ರಿಗಳು) :-** ಮಾನ್ಯ ಸಭಾಧ್ಯಕ್ಷರೇ, ಈ ವಿಷಯದ ಬಗ್ಗೆ ಸರ್ಕಾರದ ವಿವರಣೆಯನ್ನು ಬಯಸಿ ಶ್ರೀ ಮಾನ್ಯ ಶಿವಕುಮಾರ್ ರವರು ಹಾಗೂ ಶ್ರೀಮಾನ್ ಸೋಮಶೇಖರ್‌ರವರು ಮತ್ತು ಶ್ರೀಮತಿ ವಿಜಯಲಕ್ಷ್ಮಿ ಬಂಡಿ ಸಿದ್ದೇಗೌಡರು ಹಾಗೂ ಶ್ರೀ ಕೆ. ಎನ್. ನಾಗೇಗೌಡರು ಸರ್ಕಾರದ ವತಿಯಿಂದ ಲಿಖಿತವಾದ ಒಂದು

ಹೇಳಿಕೆಯನ್ನು ಅಪೇಕ್ಷೆ ಮಾಡಿ ಅವರೇನು ನಿಯಮಾವಳಿ ಪ್ರಕಾರ ಸೂಚನೆಯನ್ನು ಕಳಹಿಸಿದ್ದರೋ ಆ ಸಂದರ್ಭದಲ್ಲಿ ಮೊನ್ನೆ ನಾನು ವಿವರಣೆಯನ್ನು ಕೊಡಲಿಕ್ಕೆ ಸಾಧ್ಯವಾಗಲಿಲ್ಲ. ಇದರ ಬಗ್ಗೆ ಬಹಳ ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಏನು ವರುಣಾ ನಾಲೆಯ ಸಂಬಂಧದಲ್ಲಿ ಒಂದು ಗೊಂದಲ ಇದೆ, ಈ ಗೊಂದಲದ ಬಗ್ಗೆ ರಾಜ್ಯದ ಉಚ್ಚನ್ಯಾಯಾಲಯದಲ್ಲೂ ಕೂಡ ಮೊಕದ್ದಮೆ ಇದೆ. ನಾನು ಈ ಸಂದರ್ಭದಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛಿಪಡುತ್ತೇನೆ. ನಾನು ಜನತಾ ದರ್ಶನ ಕಾರ್ಯಕ್ರಮಕ್ಕೆ ಹೋದಂಥ ಕಾಲದಲ್ಲಿ ಅವರ ಸಮ್ಮುಖದಲ್ಲಿಯೇ ಅಲ್ಲಿಯ ಲೋಕಸಭಾಸದಸ್ಯರು ಮತ್ತು ಇನ್ನು ಅನೇಕ ಜನ ಮುಖಂಡರುಗಳು ಸೇರಿ ಈ ಒಂದು ತಾಂತ್ರಿಕ ನಿರ್ಣಯದ ಬಗ್ಗೆ ಸ್ವಲ್ಪಮಟ್ಟಿಗೆ ಹಿಂದಿನ ಸರ್ಕಾರ 1989 ರಲ್ಲಿ ಅಧಿಕಾರಕ್ಕೆ ಬಂದಂಥ ಸರ್ಕಾರ ಅಲ್ಲಿಂದ ಈಚೆಗೆ ಕೆಲವು ಮಾರ್ಪಾಡುಗಳನ್ನು ಮಾಡಿದ್ದಾರೆ. ವರುಣಾ ನಾಲೆಯ ಏನು ನಿಗದಿತ ಪ್ರದೇಶ ಇದೆಯೋ, ನೀರನ್ನು ಒದಗಿಸುವ ಪ್ರದೇಶ ಕೂಡ ಹೆಚ್ಚು ಮಾಡಿದ್ದಾರೆ. ಅಷ್ಟೇ ಅಲ್ಲ, ಅದರ ಜೊತೆಗೆ ಅಲ್ಲಿ ಕನ್ನಂಬಾಡಿ ಕಟ್ಟೆಯಿಂದ ಅಂದರೆ ಕೆಆರ್‌ಎಸ್‌ನಿಂದ ಈಗ ಇರುವ ಎಕ್ಸಿಸ್ಟಿಂಗ್ ತೂಬಿನಲ್ಲಿಯೇ ಹಿಂದೆ ಏನು ನಿರ್ಣಯ ಮಾಡಿದ್ದರೋ ಆ ನಿರ್ಣಯ ಮಾಡಿದಂಥ ಭೂಪ್ರದೇಶಕ್ಕೆ ನೀರನ್ನು ಕೊಡಬಹುದು, ಈ ಡ್ಯಾಮ್‌ನ ಪಕ್ಕದಲ್ಲಿ ಈಗ ಇರುವ ಎಕ್ಸಿಸ್ಟಿಂಗ್ ಪಕ್ಕದಲ್ಲಿ ಮತ್ತೊಂದು sluice-ಅನ್ನು ನಿರ್ಮಾಣ ಮಾಡಬೇಕಾದ ಅವಶ್ಯಕತೆ ಇಲ್ಲ ಎಂದು ಹೇಳಿ ಚರ್ಚೆಯಾಯಿತು. ಆಗ ತಾವೆಲ್ಲಾ ಅಲ್ಲೇ ಇದ್ದಿರಿ. ಆ ಸಂದರ್ಭದಲ್ಲಿ ಹಾಲಿ ಲೋಕಸಭಾ ಸದಸ್ಯರು, ಕಾಂಗ್ರೆಸ್ ಮುಖಂಡರುಗಳೂ ಬಂದಿದ್ದರು. ನಮ್ಮ ಇಂಜಿನಿಯರ್‌ಗಳ ಬಗ್ಗೆ ನಿಮಗೆ ವಿಶ್ವಾಸ ಇಲ್ಲದೇ ಇದ್ದರೆ ನೀವು ಯಾವ ಇಂಜಿನಿಯರ್‌ಗಳನ್ನು ಸೂಚನೆ ಮಾಡುತ್ತೀರೋ ಅವರಿಗೇ ವಹಿಸುತ್ತೇನೆ. ಅವರೇ ಪುನಃ ಪರಿಶೀಲನೆ ಮಾಡಲಿ. ಇನ್ನೊಂದು ತೂಬನ್ನು ಇಡಬೇಕು, ಇರತಕ್ಕಂಥ ತೂಬಿನಲ್ಲೇ ಈ ಭಾಗಕ್ಕೂ ನೀರು ಕೊಡುವುದಕ್ಕೆ ಸಾಧ್ಯವೇ, ನಮ್ಮ ಅಧಿಕಾರಿಗಳಿಗೆ ಕೊಟ್ಟರೆ ನಿಷ್ಪಕ್ಷಪಾತವಾದಂಥ ವರದಿ ಬರುವುದಿಲ್ಲ ಎನ್ನುವ ನಿಮ್ಮ ಭಾವನೆ ಏನಿದೆ, ನೀವು ಯಾವುದೇ ಅಧಿಕಾರಿಗಳ ಹೆಸರನ್ನು ಸೂಚಿಸಿದರೆ ಹೊರರಾಜ್ಯದ ಅಧಿಕಾರಿಯ ಹೆಸರನ್ನು ಸೂಚಿಸಿದರೂ ನಾನು ಒಪ್ಪಿಕೊಳ್ಳುತ್ತೇನೆ ಎಂದು ಹೇಳಿದೆ. ಲೋಕಸಭಾಸದಸ್ಯರು ಬಹಳ ತುಂಬಾ ಒತ್ತಡವನ್ನು ತೆಗೆದುಕೊಂಡು ಬಂದರು. ಅವರೆಲ್ಲಾ ಸ್ನೇಹಿತರುಗಳ ಜೊತೆ ಸೇರಿ ಅವರು ಹೇಳಿದರು, 15 ದಿವಸದ ಒಳಗೆ ನಾನು ಒಬ್ಬ ಇಂಜಿನಿಯರ್ ಹೆಸರನ್ನು ಗುರುತಿಸುತ್ತೇನೆ. ನಿಮಗೆ ಅವರ ಹೆಸರನ್ನು ನಾನು ತಿಳಿಸುತ್ತೇನೆ, ಅವರನ್ನು ನೇಮಕ ಮಾಡಿ ಅವರಿಂದ ವಿಚಾರಣೆ ಮಾಡಿಸಿ ಎಂದು ಹೇಳಿದರು. ತಾಂತ್ರಿಕವಾದ ಅಭಿಪ್ರಾಯವನ್ನು ಪಡೆದುಕೊಳ್ಳಬೇಕು ನಾವು. ನಾವು ಯಾವುದೇ ನಿರ್ಣಯವನ್ನು ಮಾಡುವುದಕ್ಕಿಂತ ಮುಂಚೆ ಇದು ಸತ್ಯ ತಾನೆ? ಏಕೆಂದರೆ ನಾನು ಹೇಳಿದ್ದೆಲ್ಲಾ ಅಸತ್ಯವಾಗಿಬಿಡುತ್ತದೆ. ಒಂದೊಂದು ಸಾರಿ. ಅವರು ಒಪ್ಪಿ 15 ದಿವಸದ ಒಳಗೆ ಎಲ್ಲರೂ ಬಂದರು. 15 ದಿವಸ ಆಯಿತು. ಒಂದು ತಿಂಗಳು ಆಯಿತು, ಒಂದೂವರೆ ತಿಂಗಳಾಯಿತು. ನನ್ನ ಹತ್ತಿರ ಯಾರು ಬಂದಿಲ್ಲ. ಇವರು ಹೇಳುತ್ತಾರೆ, ನಮ್ಮ ರಾಜ್ಯದ ಟೆಕ್ನಿಕಲ್ ಕಮಿಟಿಯವರ ಜೊತೆ ವಿಚಾರ ಮಾಡಿಸಿ ಎಂದು. ನಾನು ಈಗಲೂ ಹೇಳುತ್ತೇನೆ, ಲೋಕಸಭಾ ಸದಸ್ಯರು ಏನು ಹೇಳಿದರು, ಗೊಂದಲ ಸೃಷ್ಟಿಯಾಗುತ್ತಿದೆ ಅಲ್ಲಿ ಎಂದು. ಸೃಷ್ಟಿ ಮಾಡುತ್ತಿರುವವರು ರಾಜಕಾರಣಿಗಳೇ ಪಾರ್ಲಿಮೆಂಟ್ ಚುನಾವಣೆ ಹತ್ತಿರ ಬರುತ್ತಿದೆ. ಅವರು ಗೊಂದಲ ಸೃಷ್ಟಿ ಮಾಡಲೇಬೇಕು. ಗೊಂದಲ ಸೃಷ್ಟಿಮಾಡದಿದ್ದರೆ ಹೇಗೆ ಆಗುತ್ತದೆ? ಆದ್ದರಿಂದ ಈಗಲೂ ಲೋಕಸಭಾ ಸದಸ್ಯರಿಗೆ ಅವರು ಕೊಟ್ಟಂಥ ಭರವಸೆಯನ್ನು ಜ್ಞಾಪಿಸುತ್ತೇನೆ. ಈ ರಾಷ್ಟ್ರದಲ್ಲಿ ಯಾವುದೇ ಒಬ್ಬ ತಜ್ಞ ಇಂಜಿನಿಯರ್

ಹೆಸರನ್ನು ಅವರು ಸೂಚಿಸಿದರೂ ಅವರನ್ನು ನೇಮಕ ಮಾಡಿ ನಾನು ಅವರಿಂದ ವಿಚಾರಣೆ ಮಾಡಿಸಲಿಕ್ಕೆ ಸಿದ್ದನಿದ್ದೇನೆ. ಒಂದು ವೇಳೆ ಅವರು ಮರೆತುಹೋಗಿದ್ದರೆ ನಾನು ಇತ್ತೀಚೆಗೆ ಐದು ಟಿಎಂಸಿ ನೀರು ಬಿಟ್ಟಿದ್ದೊಂದು ಪಾಪ ಅವರಿಗೆ ಬಹಳ ತೀವ್ರ ಆತಂಕವಾಗಿ ಆ ಕಡೆ ಗಮನವನ್ನು ಹರಿಸಿದರು. ಈಗೆಲ್ಲಾ ನೀರು ತುಂಬಿಹೋಗಿದೆ. ಇನ್ನೂ ನಾನು ಜ್ಞಾಪಕಕ್ಕೆ ತರುತ್ತೇನೆ. ಈಗ ಯಾರಾದರೂ ಇಡೀ ಹಿಂದೂಸ್ಥಾನದಲ್ಲಿ ಒಬ್ಬರು ತಜ್ಞರನ್ನು ಹುಡುಕಿ ಅವರು ದಯಮಾಡಿ ನಿಮ್ಮ ಲೋಕಸಭಾಸದಸ್ಯರು ಅವರಿಗೆ ಬೇಕಾದಂಥ ಇಂಜಿನಿಯರ್ ಹೆಸರನ್ನೇ ಕೊಟ್ಟರೆ ಅವರನ್ನೇ ನೇಮಕ ಮಾಡುತ್ತೇನೆಂದು ಹೇಳುತ್ತೇನೆ. ಅವರಿಗೆ ಇಂಜಿನಿಯರ್‌ಗಳು ಸಿಕ್ಕದೇ ಹೋದರೆ ನಮ್ಮ ತಾಂತ್ರಿಕ ಸಮಿತಿ ಇದೆ. ಶ್ರೀ ಮಾನ್ ಕೆ. ಸಿ. ರೆಡ್ಡಿಯವರು ಅವರು ತಾಂತ್ರಿಕ ಸಮಿತಿಯ ಅಧ್ಯಕ್ಷರು. ಅವರ ಜೊತೆ ಇನ್ನೂ ಮೂರು ಜನ ಎಕ್ಸ್‌ಪರ್ಟ್ಸ್ ಇದ್ದಾರೆ. ಅವರಿಗೆ ರೆಫರ್ ಮಾಡುತ್ತೇನೆ. ಅವರು ಕೊಟ್ಟಂಥ ತಾಂತ್ರಿಕ ವರದಿಯ ಆಧಾರದ ಮೇಲೆ ನಮ್ಮೆಲ್ಲಾ ಶಾಸಕರನ್ನೂ ಕರೆಯಿಸಿ ಚರ್ಚೆ ಮಾಡಿ ಆ ಮೇಲೆ ಅಂತಿಮ ನಿರ್ಣಯಕ್ಕೆ ಬರುತ್ತೇನೆ ಎನ್ನುವ ಮಾತನ್ನು ಈ ಸಭೆಯಲ್ಲಿ ಬಹುಶಃ ನಾನು ಹೇಳಿದರೆ ನಿಮಗೆಲ್ಲಾ ಸಮಾಧಾನವಾಗಬಹುದು ಎಂದು ಹೇಳಿ ನಾನು ಭಾವಿಸುತ್ತೇನೆ. ಅದಕ್ಕಿಂತ ಮತ್ತೇನೂ ಹೇಳಬೇಕಾದಂಥ ಅವಶ್ಯಕತೆ ಇಲ್ಲ ಎಂದು ಹೇಳಿ ನಾನು ಭಾವಿಸಿಕೊಳ್ಳುತ್ತೇನೆ.

ಶ್ರೀ ಜೆ. ಬಿ. ಶಿವಕುಮಾರ್ :- ನಮ್ಮ ಒತ್ತಾಯನೂ ಕೂಡ ಅಷ್ಟೇ. ತಾವು ತೆಗೆದುಕೊಂಡಿರತಕ್ಕ ನಿರ್ಧಾರಕ್ಕೆ ನಾವು ಜಿಲ್ಲೆಯ ರೈತರ ಪರವಾಗಿ ಅಪಾರ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ತಾವೇನು ತಾಂತ್ರಿಕ ಸಮಿತಿ, ಶ್ರೀ ಮಾನ್ ಕೆ. ಸಿ. ರೆಡ್ಡಿಯವರ ನೇತೃತ್ವದಲ್ಲಿ ಅದಕ್ಕೆ ಒಪ್ಪಿಸಬೇಕು ಎಂದು ಹೇಳುತ್ತಿದ್ದೀರ ; ಆ ರೀತಿ ಮಾಡಿದರೆ ನಮಗೆ ವಿಶ್ವಾಸ ಇದೆ. ನಮಗೆ ನ್ಯಾಯ ಸಿಗುತ್ತದೆ ಎನ್ನತಕ್ಕದ್ದು.

ಶ್ರೀ ಹೆಚ್. ಡಿ ದೇವೇಗೌಡ :- ಅದರ ಬಗ್ಗೆ ರೆಫರ್ ಮಾಡಲು ಪ್ರಯತ್ನ ಮಾಡುತ್ತೇನೆ. ಅದಕ್ಕೆ ಏನೂ ಕಾಲ ಗಳಿಗೆ ಬೇಕಾಗಿಲ್ಲ. ಸರ್ಕಾರದ ಒಂದು ಆದೇಶ ಕೊಡಲಿಕ್ಕೆ ಇಚ್ಛಿಪಡುತ್ತೇನೆ. ಆಮೇಲೆ ಶ್ರೀಮಾನ್ ಯಾವಗಲ್ ಅವರು ಏನು ಹೇಳಿದರು, ಇವರು ನವಲಗುಂದ, ನರಗುಂದ ಭಾಗದಲ್ಲಿ ಎಂದು.

+ **ಶ್ರೀ ಬಿ. ಆರ್. ಯಾವಗಲ್ :-** ಅದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ? ಆ ಕಾಲುವೆಗಳ ರಚನೆ ಮತ್ತು ಈಗ ಇರುವಂತಹ ಪರಿಸ್ಥಿತಿಯಲ್ಲಿ ನೀರು ಹೋಗಲಿಕ್ಕೇ ಸಾಧ್ಯ ಇಲ್ಲ. ಆ ಪರಿಸ್ಥಿತಿ ಇದೆ. ಅದಕ್ಕೆ ಸ್ಪಡಿ ಸರಿಯಾಗಿ ಮಾಡಿ ಏನಾದರೂ ಮುಂದಿನವರ್ಷ ಅಥವಾ ಅದರ ಮುಂದಿನ ವರ್ಷವೋ ಮಾಡಿ. ಈ ವರ್ಷ ಇಲ್ಲಿಯವರೆಗೆ ಬಂದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ :- ಶೀಘ್ರವಾಗಿ ರಿಪೇರಿ ಮಾಡಿಸತಕ್ಕದ್ದರ ಬಗ್ಗೆ ನೀರು ಹೋಗಲಿಕ್ಕೆ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲಿಕ್ಕೆ ಅಶ್ವಾಸನೆ ಕೊಡುತ್ತೇನೆ. ಅವರು ನಮ್ಮ ಸ್ನೇಹಿತರು ಹೇಳಿದರು. ನಾನು ಇವತ್ತೇ ನಾವು ನೀವು ಬಿಷಪ್ ಕಾಟನ್‌ನ ಕಾರ್ಯಕ್ರಮಕ್ಕೆ ಹೋಗಿ ಬಂದ ತಕ್ಷಣ ಅಧಿಕಾರಿಗಳನ್ನು ಕರೆಸಿ ಆದೇಶವನ್ನು ಕೊಡುತ್ತೇನೆ.

(ಗೊಂದಲ)

ಶ್ರೀ ಹೆಚ್. ಡಿ. ದೇವೇಗೌಡ :- ನೀರು ಬರುವ ಹಾಗೆ ಮಾಡಿಸುತ್ತೇನೆ. ನಿನ್ನೆ ಈ ಸದನದಲ್ಲಿ ಮಾತನಾಡುವಾಗ ತಾವು ಇದ್ದೀರಿ. ತಮ್ಮ ಸಮ್ಮುಖದಲ್ಲಿ ತಮ್ಮ ಆಫೀಸ್‌ನ ರೆಕಾರ್ಡ್ ತರಿಸಿದ್ದೇವೆ. ನಾನು ವೀರಪ್ಪ ಮೊಯಿಲಿಯವರಿಗೆ ಗೇಲಿ ಮಾಡಿದ್ದೇನೆಂದು ಹೇಳಿ ಬಹಳ ದೊಡ್ಡ ಹೇಳಿಕೆ ಬಂದಿದೆ. ಕೇಂದ್ರದ ಸರ್ಫೇಸ್ ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ಒಂದು ಮಾತು ಹೇಳಿದ್ದರು. ಅದನ್ನು ಹೇಳಲೇಬೇಕಾಗುತ್ತದೆ. ಇದುವರೆಗೆ ನನ್ನ ಬಾಯಿಂದ ಬರಲಿಲ್ಲ. ಅಸತ್ಯವನ್ನು ಮಾತನಾಡತಕ್ಕಂಥದಕ್ಕೆ ಯಾರಿಗಾದರೂ ಭಾರತ ರತ್ನ ಪ್ರಶಸ್ತಿ ಕೊಡುವುದಿದ್ದರೆ ಶ್ರೀ ವೀರಪ್ಪ ಮೊಯಿಲಿಯವರಿಗೆ ಕೊಡಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ಇಲ್ಲೇ ನಿಮ್ಮ ಆಫೀಸಿನಿಂದ ತರಿಸಿರತಕ್ಕ ನನ್ನ ಭಾಷಣದ ಪ್ರತಿ ಇದೆ. ದಯಮಾಡಿ ಮತ್ತೆ ಓದಿಬಿಡುತ್ತೇನೆ, ಏಕೆಂದರೆ ಜನಗಳ ಮನಸ್ಸಿನಲ್ಲಿ ತಪ್ಪು ಕಲ್ಪನೆ ಮಾಡತಕ್ಕದ್ದರ ಬಗ್ಗೆ ಯಾರೇ ಪ್ರಯತ್ನ ಮಾಡಿದರೂ ಸತ್ಯವನ್ನು ಮುಚ್ಚಲಿಕ್ಕೆ ಆಗುವುದಿಲ್ಲ. A man like Veerappa Moily, who is the former Chief Minister of the State, ಒಂದು ಕಡೆ ಹೇಳಿದರು. ಎಲ್ಲೋ ಅಲ್ಲ; ಕೋಲಾರದಲ್ಲಿ ಹೇಳಿದ್ದಾರೆ. ನಮ್ಮ ವಂಶಿಕರು ದೇವಸ್ಥಾನದಲ್ಲಿ ತುತೂರಿ ಊದಿ ಊದಿ ಸಾಕಾಗಿದೆ, ನಾವು ಇವರನ್ನು ಬಿಡುತ್ತೇವಾ, ಎಂದು ಹೇಳಿದವರು ಅವರ ಜೊತೆ ರಾಜಭವನಕ್ಕೆ ಹೋಗುತ್ತಾರೆ. This is the music, ದೇವಸ್ಥಾನದಲ್ಲಿ ನಮ್ಮ ವಂಶಿಕರು ಪೀಪಿ ಊದಿ ಸಾಕಾಗಿದೆ. ನಾವು ಇವರ ಜೊತೆಗೆ ಸೇರುತ್ತೇವಾ, ಎಂದು ಹೇಳಿದವರು today the bondage, a new political alignment. I am so happy, the true colours have come out. ಇದನ್ನು ಹೇಳಿದ್ದಾರೆ. ಅವರು ಹೊರಗಡೆ ಹೇಳಿದ್ದಾರೆ; ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿಯವರು 15-03-95 ರಂದು ಮುಖ್ಯಮಂತ್ರಿಗಳು ಮಾಡಿದಂತಹ ಭಾಷಣದ ವರ್ತನೆಯನ್ನು ಖಂಡಿಸಿ, ಸಮಾಜದ ಹೆಸರು ಹೇಳಿದ್ದಾರೆ. ಇದು ಸಭೆಯ ರೆಕಾರ್ಡಗೆ ಹೋಗಬಾರದು. ಅದಕ್ಕೆ ಓದಿ ಬಿಡುತ್ತೇನೆ. I don't want to read out what he has said outside... ಯಾವುದೇ ಸಮಾಜದ ಬಗ್ಗೆ ನಾನು ಲಘುವಾಗಿ ಮಾತನಾಡಲಿಕ್ಕೆ ಸಿದ್ಧನಿಲ್ಲ. ನಮ್ಮ ತಂದೆಯ ಹೆಸರನ್ನು ಹೇಳಿದೆ ನಾನು ಅವರು ಹಿಂದೆ ತಮ್ಮ ಹೆಂಡತಿಯ ಮನೆಗೆ ಹೋಗುವಾಗ ತಲೆಗೆ ಜುಟ್ಟಲ್ಲಿ ಹೂವು ಇಟ್ಟುಕೊಂಡು ಹೋಗುತ್ತಿದ್ದರು ಎಂದು ಹೇಳಿದೆ. ನಾನು ಹೇಳಿದಂತಹ ಕಾಂಟೆಕ್ಸ್ಟ್ ಏನು? ಇವತ್ತು ಬಿಜೆಪಿಯವರ ಜೊತೆ ಯಾವ ಕಾಂಗ್ರೆಸ್ ಏನು ಹೋರಾಟ ಮಾಡಿದೆಯೋ ಅಂಥಾದ್ದು ಇವರು ಒಂದುಗೂಡಿ ಹೋಗುತ್ತಿದ್ದಾರೆ. ಅವರೇ ಹೇಳಿದಂತಹ ಮಾತು ಇದು. ನಾನು ಹೇಳಿದ್ದಲ್ಲ. ಈ ರಾಜ್ಯದ ಯಾವುದೇ ಸಮಾಜದ ಹೆಸರಿನಲ್ಲಿ ತುಚ್ಛವಾಗಿ ಮಾತನಾಡತಕ್ಕದ್ದು ನನ್ನ ಜೀವನದಲ್ಲಿ ಇಲ್ಲ. ಅವರು ಹೇಳಿದಂತಹ ಮಾತನ್ನು ಹೇಳಿದ್ದೇನೆ. ನಮ್ಮ ವಂಶಿಕರು ತುತ್ತೂರಿ ಊದಿ ಊದಿ ಸಾಕಾಗಿದೆ ಎಂದು ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಿಜೆಪಿ ಬೆಳೆಯುತ್ತಿರತಕ್ಕ ಬಗ್ಗೆ ವ್ಯಾಖ್ಯಾನ ಮಾಡಿದ್ದು ಅವರು. ಅದನ್ನು ಉಲ್ಲೇಖ ಮಾಡಿದೆ. ಮತ್ತೊಮ್ಮೆ ಇಲ್ಲಿ ಸ್ಪಷ್ಟೀಕರಣ ಕೊಡುತ್ತೇವೆ. ನನ್ನ ಬಾಯಿಂದ ಯಾವುದೇ ಒಂದು ಸಮಾಜದ ಬಗ್ಗೆ ಅಗೌರವದ ಮಾತು ಬರಲಿಕ್ಕೆ ಸಾಧ್ಯ ಇಲ್ಲ. ವೀರಪ್ಪ ಮೊಯಿಲಿಯವರು ರಾಜಕೀಯ ಏನು ಬೇಕಾದರೂ ಮಾಡಿಕೊಳ್ಳಲಿ. ಆದರೆ ಈ ರೀತಿ ಹೇಳತಕ್ಕದ್ದು ವಸ್ತು ಸ್ಥಿತಿ ಅಲ್ಲ. ಸದನದಲ್ಲಿ ತಮ್ಮೆಲ್ಲರ ಮುಂದೆ ನಡೆದಂಥದು. ಸದನದ ರೆಕಾರ್ಡನಲ್ಲಿದೆ. ಇದನ್ನು ತಮ್ಮಲ್ಲಿ ಸ್ಪಷ್ಟೀಕರಣ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ದಯಮಾಡಿ ಯಾವುದೇ ವರ್ಗದ ಬಗ್ಗೆ ಪ್ರಚೋದನೆ ಮಾಡಿ ರಾಜಕೀಯದಲ್ಲಿ ತಾವೇನಾದರೂ ಸ್ವಾರ್ಥ ಸಾಧಿಸಿಬಿಡುತ್ತೇವೆ ಎಂದು ಹೇಳಿದರೆ, ಅದು ಸತ್ಯವನ್ನು ಬಹಳ ದಿವಸ ಮುಚ್ಚಿಡಲು ಸಾಧ್ಯ

ಇಲ್ಲ ಎನ್ನುವ ಕಾರಣಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆ. ನನಗೆ ಎಲ್ಲಾ ವರ್ಗದ ಸಮಾಜದ ಬಗ್ಗೆ ಗೌರವ ಇದೆ. ಅಂತಹ ಒಂದು ಕೀಳು ಮಟ್ಟದ ರಾಜಕಾರಣ ಮಾಡಬೇಕಾಗಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೂ ಒಂದು ವಿಷಯವನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ನಾನು ಆಗಲೇ ಹೇಳಬೇಕಾಗಿತ್ತು. ಪದೇ ಪದೇ ನಾನು ಹೇಳಬೇಕಾಗಿರುವುದು ರೆಕಾರ್ಡಗೆ ಹೋಗಬೇಕಾಗುತ್ತದೆ. ಪದೇ ಪದೇ ನಾನು ಹೇಳಬೇಕಾಗಿರುವುದು ರೆಕಾರ್ಡ್‌ಗೆ ಹೋಗಬೇಕಾಗುತ್ತದೆ. ಮೊನ್ನೆ ಕೌನ್ಸಿಲ್‌ನಲ್ಲಿ ಈ ಮಾತನ್ನು ಹೇಳಿದೆ. ಏಕೆಂದರೆ ಇವತ್ತು ವಾಸುದೇವನ್ ಅವರ ವಿಷಯದ ಬಗ್ಗೆ ದೇವೇಗೌಡರು ಏನೋ ಮುಚ್ಚಿಡಲು ಪ್ರಯತ್ನ ಮಾಡುತ್ತಿದ್ದಾರೆ. ಸತ್ಯ ಒಂದು ವಿಷಯ ಮುಚ್ಚಿಟ್ಟಿದ್ದು ನಿಜ. ಅದಕ್ಕೆ ಸಭೆಯಲ್ಲಿ ಒಂದು ವಿಷಯ ಮನಮುಟ್ಟಿ ಹೇಳಬೇಕಾಗುತ್ತದೆ. ಅದೇನೆಂದರೆ ನಾನು ಓತ್ ತೆಗೆದುಕೊಂಡ ಮರು ಗಳಿಗೆಯೊಳಗೆ ಒಂದು ಮಾತನ್ನು ಹೇಳಿದೆ. ಯಾವುದೇ ಹಿಂದಿನ ಸರ್ಕಾರದ ಬಗ್ಗೆ ನಾನು ಪೊಲಿಟಿಕಲ್ ಆಗಿ ವಿಂಡಿಕ್ಟೀವ್ ಆಗಿ ಹೋಗಲು ಸಿದ್ಧ ಇಲ್ಲ. ನನಗೆ ಪೊಲಿಟಿಕಲ್ ವೆಂಡೆಟಾ ಇಲ್ಲ. ನನ್ನ ಜನ ಏನು ಅಧಿಕಾರ ಕೊಟ್ಟಿದ್ದಾರೋ ಅದನ್ನು ಪ್ರಾಮಾಣಿಕವಾಗಿ ರಾಜ್ಯದ ಅಭಿವೃದ್ಧಿಗೆ ಬೆಳೆಸಿಕೊಳ್ಳುತ್ತೇನೆ ಎನ್ನುವ ಮಾತನ್ನು ಹೇಳಿದೆ. ಆದ್ದರಿಂದ ಪುನಃ ಇವತ್ತು ಹೇಳಬೇಕಾಗುತ್ತದೆ. ಇಲ್ಲಿ ಮುಚ್ಚಿಡಬೇಕಾದ್ದು ಕಳುಹಿಸತಕ್ಕ ಕಾಲದಲ್ಲಿ ಇದನ್ನೂ ಸೇರಿಸಿಯೇ ಕಳುಹಿಸುತ್ತೇನೆ. ಗವರ್ನರ್ ಬೇಕಾದರೆ ರಾಷ್ಟ್ರಪತಿಗೂ ಕಳುಹಿಸಲಿ, ಯಾರಿಗೆ ಬೇಕಾದರೂ ಕಳುಹಿಸಲಿ, ಅವರು ಯಾವ ನಿರ್ಣಯ ಬೇಕಾದರೂ ತೆಗೆದುಕೊಳ್ಳಲಿ. 17-3-1993 ರಲ್ಲಿ ಧನಂಜಯ್ ಅವರ ಬಗ್ಗೆ ಶ್ರೀಮಾನ್ ಗೋಪೀನಾಥ್ ಸಾಂಡ್ರಾ ಅವರು ಇದ್ದಾಗ, ಈ ಸಭೆಯ ರೆಕಾರ್ಡ್‌ಗೆ ಹೋಗಬೇಕು. ಈ ಕಾರಣದಿಂದ ಓದುತ್ತೇನೆ.

Sri T. R. Dhananjaya, Superintending Engineer, Bangalore City Corporation, who is deprived of his legitimate rights of being promoted to the higher post of Chief Engineer despite the specific directions issued by the Hon'ble High Court of Karnataka in Writ Petition Nos. 12069/1977 dated 1-7-1985 and also in the Writ Petition No. 11343/78 and the Writ petition No. 20,147 to 20,148/1979 dated 15-5-1981, High Court of Karnataka and also the Supreme Court of India in SLP 3480/89 dated 21-9-1990 and SLP 7317/1984 dated 12-11-1990, the Bangalore City Corporation has flouted all the local norms, court orders and the Hon'ble High Court of Karnataka and also the highest court namely Supreme Court of India, owing to inaction on the part of the Bangalore City Corporation on the part of the Government. Sri T. R. Dhananjaya, SE, was driven to the extreme step of approaching the Hon'ble High Court of Karnataka in Contempt Court Proceedings vide No. 3340 and 3341 of 1991-93 in which the Hon'ble High Court of Karnataka has ordered both the Corporation and the Governement to implement the orders of the High Court

of Karnataka and the Supreme Court of India within three weeks, time from 11-2-93. In view of the above orders, it was mandatory on the part of the Bangalore City Corporation to give immediate promotion to Sri T. R. Dhananjaya, Superintendent Engineer to the Cadre of Chief Engineer in place of the present incumbent Who is junior to him and who is having number of allegations against him from the public and also in the press. These facts clearly show the malafide intention of some vested interest in the previous Government while giving promotion to the present incumbent as Chief Engineer denying justice to Sri T.R. Dhananjaya who also belongs to Scheduled Caste, an upright Officer with an excellent service record for more than 20 years. For this illegal act on the part of the BCC, he has to struggle for his legal rights to get the justice from the past 15 years. Apart from the above, the then Commissioner, BCC on receipt of legal advice from the legal officers of the Corporation has also accepted and ordered that Sri T.R. Dhananjaya who is senior to Sri Venkatesh, file bearing No. B.12 (6) PR 203/1981-82 which is not given into effect in view of the interference of the previous Government. The Hon'ble Chief Minister therefore earneslly requested to kidly intervene and take action immediately by giving direction to promote Sri T.R. Dhananjaya, as Chief Engineer, BCC in place of present incumbent in the interest of natural justice and equity. This letter was written on 17-3-1993.

ಏಕೆಂದರೆ ಇವರೇನು ಗವರ್ನರ್‌ರವರಿಗೆ ಒಂದು ಮೆಮೋರ್ಯಾಂಡಮ್ ಸಲ್ಲಿಸಿದ್ದಾರೆ, ಗವರ್ನರ್ ಅವರು ವಿವರಗಳನ್ನು ಕೇಳಿದ್ದಾರೆ. ನಾಳೆ ಕ್ಯಾಬಿನೆಟ್ ಮುಂದೆ ಈ ವಿಚಾರ ಇಟ್ಟು ಅದನ್ನು ಗವರ್ನರ್‌ಗೆ ಕಳುಹಿಸುತ್ತಿದ್ದೇನೆ. ಆದರಿಂದಲೇ ನಾನು ಈ ಒಂದು ಡಾಕ್ಯುಮೆಂಟನ್ನು ಈ ಸಭೆಯ ಮುಂದೆ ಇಡಲಿಲ್ಲ. ಏಕೆಂದರೆ ಇದು ಕಳೆದು ಹೋದ ವಿಷಯ, ಇದರ ಅವಶ್ಯಕತೆ ಇಲ್ಲ ಎಂದು ಹೇಳಿ. ದೇವೇಗೌಡರು ಜೀವನದಲ್ಲಿ ಏನೋ ಮರೆ ಮಾಚಿ ಇಟ್ಟುಕೊಳ್ಳುತ್ತಿದ್ದಾರೆ ಎಂದು ಹೇಳಿದ್ದಾರೆ. ಇದು ಅವರ ಆಫೀಸಿನಿಂದ ಯಾವಾಗ ವಾಪಸ್ಸು ಹೋಗುತ್ತದೆ ಎಂದು ಹೇಳಿದರೆ. ಶ್ರೀ ಎಸ್. ವಿ. ರಂಗನಾಥ್‌ಅವರು ಕಳುಹಿಸಿಕೊಟ್ಟಿರ ತಕ್ಕದ್ದು. 17-4-93 ರಿಂದ 2-12-93 ರವರೆಗೆ, ಅಂದರೆ, ಸುಮಾರು ಒಂಭತ್ತು ತಿಂಗಳುಗಳ ತನಕ ಮುಖ್ಯಮಂತ್ರಿಯವರ ಕಛೇರಿಯಲ್ಲಿತ್ತೆಂದು ಕಾಣುತ್ತದೆ. ಆನಂತರ, ಅವರ ಕಛೇರಿಯಿಂದ ಹೋಗುತ್ತದೆ. ಇದರ ಬಗ್ಗೆ ನಾನು ಹೆಚ್ಚು ವ್ಯಾಖ್ಯಾನಿಸಲು ಹೋಗದೆ ಇದೊಂದು ವಿಷಯವನ್ನು ಸದನದ ಗಮನಕ್ಕೆ ತರುತ್ತೇನೆ. ಏಕೆಂದರೆ, ಬೆಳಿಗ್ಗೆಯಿಂದ ಸಂಜೆವರೆವಿಗೂ ಪ್ರಯತ್ನಪಟ್ಟರೂ ಸರ್ಕಾರ ಬೇರೇನೂ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಲು ಹೊರಟಿದ್ದಾರೆ. ಇನ್ನೊಂದು ವಿಚಾರದಲ್ಲಿ ನಮ್ಮ ಕಾಂಗ್ರೆಸ್ಸಿನ ಸ್ನೇಹಿತರುಗಳು ಬೆಳಿಗ್ಗೆ ಧರಣಿ ಕುಳಿತ ಬಗ್ಗೆ

ಹೇಳಲೇಬೇಕಾಗುತ್ತದೆ. `` Congress sees conspiracy in the Land Reforms Bill". ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರ ಭೂ ಸುಧಾರಣೆ ಕಾಯ್ದೆಗೆ ತಿದ್ದುಪಡಿ ತಂದಿರುವುದಕ್ಕೆ 'ದಳದಿಂದ ಭೂ ಸುಧಾರಣೆಯ ಸಮಾಧಿ' ಎಂದು ಕಾಂಗ್ರೆಸ್ ಪಕ್ಷದ ನಾಯಕರು ಟೀಕಿಸಿದ್ದಾರೆ. ಯಾವುದೇ ವಿರೋಧ ಪಕ್ಷ ತನ್ನ ಕಾರ್ಯ ನಿರ್ವಹಿಸಬೇಕಾದರೆ, ಯಾವುದಾದರೊಂದು ವಿಚಾರವಾಗಿ ಹೇಳುವಾಗ ವಸ್ತುಸ್ಥಿತಿಯನ್ನು ಸ್ವಲ್ಪಮಟ್ಟಿಗೆ ಗಮನದಲ್ಲಿಟ್ಟುಕೊಂಡು ಹೇಳಿದರೆ ಮಾತ್ರ ಅದಕ್ಕೆ ಜನತೆಯಿಂದ ಮಾನ್ಯತೆ ಹಾಗೂ ಗೌರವ ಸಿಗುತ್ತದೆ ಜೊತೆಗೆ ಅದಕ್ಕೆ ಪುಷ್ಟಿಯೂ ದೊರಕುತ್ತದೆ. ಒಂದು ವಿಷಯವನ್ನು ಈ ಸದನದ ಗಮನಕ್ಕೆ ತರಬೇಕಾಗುತ್ತದೆ. ಏನೆಂದರೆ, ಬಿಜಾಪುರದಲ್ಲಿ ಅವರ ಪಕ್ಷ (ಕಾಂಗ್ರೆಸ್) ದವರೇ ಲೋಕಸಭಾ ಸದಸ್ಯರಾಗಿರುವ ಶ್ರೀ ಸಿದ್ದು ನ್ಯಾಮಗೌಡರಿದ್ದಾರೆ. ಅವರು ತಮ್ಮ ಸಕ್ಕರೆ ಕಾರ್ಖಾನೆಗೆ 230 ಎಕರೆಗಳಷ್ಟು ಜಮೀನು ಮಂಜೂರು ಮಾಡಿ ಕೊಡಬೇಕೆಂದು ಎರಡು ತಿಂಗಳುಗಳ ಹಿಂದೆ ಅನಿರ್ದಿಷ್ಟ ಕಾಲ ಅಮರಣಾಂತ ಉಪವಾಸ ಕುಳಿತಿದ್ದರು. ನಾನು ಅದಕ್ಕೆ ಸಂಬಂಧಿಸಿದ ಕಡತವನ್ನು ತರಿಸಿ ನೋಡಿದೆ. ಏಕೆಂದರೆ, ಇದು ರಾಜಕೀಯ. ಬಹುಶಃ ಸಿದ್ದುನ್ಯಾಮಗೌಡರು ಹಿಂದಿನ ಮುಖ್ಯಮಂತ್ರಿಗಳಿಗೆ ನಿಷ್ಠರಾಗಿದ್ದರೆಂದು ತೋರುತ್ತದೆ. ಆ ಕಾರಣ ಆ ಸಂಬಂಧಿತ ಕಡತದ ಬಗ್ಗೆ ಏನೊಂದೂ ನಿರ್ಣಯ ಮಾಡದೆ ಅದನ್ನು ಹಾಗೆಯೇ ಹಿಂದೆ ಸರಿಸಿದ್ದರು. ತಮ್ಮ ಸಕ್ಕರೆ ಕಾರ್ಖಾನೆಗೆ 230 ಎಕರೆಗಳಷ್ಟು ಜಮೀನನ್ನು ಕೊಡಲಿಲ್ಲವೆಂದು ಅವರು ಸರ್ಕಾರದ ವಿರುದ್ಧ ಅನಿರ್ದಿಷ್ಟ ಅವಧಿಯವರೆಗೆ ಅಮರಣಾಂತ ಉಪವಾಸ ಕುಳಿತ ನಂತರ, ನಾನು ಆ ಕಡತವನ್ನು ತರಿಸಿ ಜಿಲ್ಲಾಧಿಕಾರಿಗಳಿಗೆ ಹಾಗೂ ಜಿಲ್ಲಾ ಪೋಲೀಸ್ ವರಿಷ್ಠರಿಗೆ ಸೂಚನೆ ಕೊಟ್ಟಿದ್ದಲ್ಲದೆ ಜಮೀನಿಗೆ ಸಂಬಂಧಿಸಿದಂತೆ 2-3 ದಿವಸಗಳಲ್ಲಿ ಸರ್ಕಾರದಿಂದ ಆದೇಶ ಹೊರಡಿಸಲಾಗುವುದೆಂದು ಆಶ್ವಾಸನೆಯಿತ್ತು ತಮ್ಮ ಅಮರಣಾಂತ ಉಪವಾಸ ಸತ್ಯಾಗ್ರಹವನ್ನು ಕೇಳಿಕೊಂಡ ನಂತರ ಕೈಬಿಟ್ಟರು. ತದನಂತರ, ಅವರ ಸಕ್ಕರೆ ಕಾರ್ಖಾನೆಗೆ 230 ಎಕರೆಗಳಷ್ಟು ಜಮೀನನ್ನು ಮಂಜೂರು ಮಾಡಿದೆ. ಇದರಲ್ಲಿ ಯಾವುದೇ ಶಾಖಾಯಲವರ್ಣಾಯವಿಲ್ಲ. ಏಕೆಂದರೆ, ಒಂದು ಕಡೆ ಇವರ ಪಕ್ಷದ ಅಧ್ಯಕ್ಷರೇ ಪ್ರಧಾನಮಂತ್ರಿಗಳಾಗಿದ್ದಾರೆ. ನಾನು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು ಇನ್ನು ಒಂದು ಗಂಟೆ ಕೂಡ ಕಳೆದಿಲ್ಲ. ಆಗಲೇ ದೆಹಲಿಯಿಂದ ದೂರವಾಣಿ ಮೂಲಕ ಮಾತನಾಡುತ್ತಾ 'ನೀವು ಹೊಸ ಆರ್ಥಿಕ ನೀತಿಯನ್ನು ಬೆಂಬಲಿಸುತ್ತೀರೋ ಅಥವಾ ಇದಕ್ಕೆ ವಿರುದ್ಧ ನಿಲ್ಲುತ್ತೀರೋ?' ಎಂದು ಕೇಳಿದರು. ಆಗ ನಾನು 'ಹೊಸ ಆರ್ಥಿಕ ನೀತಿಯಿಂದ ನಮ್ಮ ರಾಜ್ಯಕ್ಕೆ ಒಳ್ಳೆಯದಾಗುವುದಾದರೆ ನಾನು ವಿರುದ್ಧವಾಗಿ ನಿಲ್ಲುವುದಿಲ್ಲ' ಎಂದು ಹೇಳಿದೆ. ಇವೊತ್ತು ನಾವು ಭೂಸುಧಾರಣೆ ಕಾಯ್ದೆಯನ್ನು ರದ್ದುಗೊಳಿಸಿಲ್ಲ. ವೀರಪ್ಪ ಮೊಯಿಲಿಯವರು ಇದರ ಬಗ್ಗೆ ತೀವ್ರತರವಾದ ಟೀಕೆ ಮಾಡಿದ್ದಾರೆ. ನಾನು ಬಿ.ಜೆ.ಪಿ. ಯವರ ಬಗ್ಗೆ ತಲೆ ಬಿಸಿ ಮಾಡಿಕೊಳ್ಳುವುದಿಲ್ಲ. ಪಾಪ! ಇವರೂ (ಕಾಂಗ್ರೆಸ್) ಸಹ ಅವರ (ಬಿಜೆಪಿ) ಜೊತೆ ಸೇರಿಕೊಂಡು ಬಿಟ್ಟರಲ್ಲಾ ಎಂಬ ಯೋಚನೆ ಅಷ್ಟೆ. ಆದರೂ ಬಹಳ ಸಂತೋಷ. ಆದೊಂದು ವಿಷಯದಲ್ಲಿ ನಾನು ಸಂತೋಷಪಡುತ್ತೇನೆ. ಇಬ್ಬರೂ ಒಂದಾಗಿ ಬಾಳಿದರೆ ಒಳ್ಳೆಯದಾಗುತ್ತದೆ. ಈಗಲೂ ಅವರು ಹಾಗೆಯೇ ಒಂದುಗೂಡಿ ನಮ್ಮ ಪಕ್ಷದ ಮೇಲೆ ಯುದ್ಧ ಮಾಡುವುದಾದರೆ ನಾವು ಎದುರಿಸುತ್ತೇವೆ. ಅದರ ಬಗ್ಗೆ ಹಿಂದೆ-ಮುಂದೆ ನೋಡುವುದಿಲ್ಲ. ಎದುರಿಸಲು ಸಿದ್ಧರಾಗಿದ್ದೇವೆ. ನಾನು ಇತ್ತೀಚೆಗೆ ಮಂಡ್ಯ ಜಿಲ್ಲೆಯ ಒಂದು ಭಾಗದಲ್ಲಿ ನಡೆದಂಥ ಸಭೆಗೆ ಹೋಗಿದ್ದೆ. ಅಲ್ಲಿ ಸುಮಾರು 20,000-25,000 ಸಂಖ್ಯೆಯಲ್ಲಿ ಜನರು ಸೇರಿದ್ದರು. ಅಲ್ಲಿಯೂ

ಕೂಡ ಇದೇ ವಿಷಯವನ್ನು ಪ್ರಸ್ತಾಪಿಸಿದೆ. ಅದರ ಬಗ್ಗೆ ದೊಡ್ಡ ವ್ಯಾಖ್ಯಾನ ಮಾಡುವಂಥ ಅವಶ್ಯಕತೆಯಿಲ್ಲ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲೇಬೇಕಾಗುತ್ತದೆ. ರಾಜ್ಯದಲ್ಲಿ ವಿದ್ಯುತ್ ಉತ್ಪಾದಿಸಲು ಕೊಜೆಂಟ್ರಿಕ್ಸ್ ಕಂಪನಿಗೆ ಇವೊತ್ತು 1000 ಎಕರೆಗಳಷ್ಟು ಜಮೀನನ್ನು ಕೊಡಬೇಕೆಂದು ತೀರ್ಮಾನಿಸಲಾಗಿದೆ. ಜಮೀನನ್ನು ಹೇಗೆ ಕೊಡುತ್ತೀರಿ? ಹಿಂದಿನ ಸರ್ಕಾರ ಇದನ್ನು ಮಾಡಲಿಲ್ಲ. ವಿದ್ಯುತ್ ಖರೀದಿ ಒಪ್ಪಂದ (ಪಿಪಿಎ)ಕ್ಕೆ ಸಹಿ ಮಾಡಿದವರು ಯಾರು? ಜನರ ಮುಂದೆ ಹೇಳುವಾಗ ಸ್ವಲ್ಪವಾದರೂ ನಮ್ಮ ಕೃತಿಗೂ ಹಾಗೂ ನಡೆ-ನುಡಿಯ ಬಗ್ಗೆ ಅರಿವು ಇಲ್ಲದಿದ್ದರೆ ದೇಶದ ಜನರು ನಂಬುವುದಕ್ಕೆ ಸಾಧ್ಯವಾಗುತ್ತದೆಯೇ?

ಶ್ರೀ ಡಿ. ಕೆ. ಶಿವಕುಮಾರ್ :- ಜನರು ನಂಬಿ ಆಗಲೇ ಮನೆಗೆ ಕಳುಹಿಸಿಬಿಟ್ಟಿದ್ದಾರಲ್ಲಾ.

ಶ್ರೀ ಹೆಚ್. ಡಿ. ದೇವೇಗೌಡ :- ಜಿಂದಾಲ್ ಉಕ್ಕು ಕಾರ್ಖಾನೆ ಸ್ಥಾಪಿಸಲು ಇವರ ಕಾಲದಲ್ಲಿ ಆದೇಶ ಹೊರಡಿಸಿದರು, ಆದೇಶ ಹೊರಡಿಸಿರುವುದು ನಾವಲ್ಲ. ಅವೊತ್ತು 3000 ಎಕರೆಗಳಷ್ಟು ಜಮೀನನ್ನು ಮಂಜೂರು ಮಾಡಬೇಕೆಂದು ಆದೇಶ ಹೊರಡಿಸುವಾಗ ಇವರಿಗೆ ಭೂ ಸುಧಾರಣೆ ಕಾಯಿದೆ ಬಗ್ಗೆ ಅರಿವು ಇರಲಿಲ್ಲ! ಇವೊತ್ತು ಕರ್ನಾಟಕದಲ್ಲಿರುವಷ್ಟು ಒತ್ತಡ ರಾಷ್ಟ್ರದ ಯಾವುದೇ ರಾಜ್ಯದಲ್ಲೂ ಕೂಡ ಇಲ್ಲ. ನಮ್ಮ ರಾಷ್ಟ್ರದಲ್ಲಿ ಹಲವಾರು ತರಹದ ಕೈಗಾರಿಕೆಗಳನ್ನು ಸ್ಥಾಪಿಸಲು ಕೈಗಾರಿಕೋದ್ಯಮಿಗಳು ಮುಂದೆ ಬರುತ್ತಿದ್ದಾರೆ. ಅದು ಪ್ರವಾಸೋದ್ಯಮ ವಾಗಿರಬಹುದು, ವಿದ್ಯುಚ್ಛಕ್ತಿಗೆ ಸಂಬಂಧಿಸಿದಂತೆ ಹೊಸ ಯೋಜನೆಗಳಿರಬಹುದು, ದೊಡ್ಡ ಪ್ರಮಾಣದ ಕೈಗಾರಿಕೆಗಳಿರಬಹುದು. ಇವೊತ್ತು ಅನೇಕ ರೂಪಗಳಲ್ಲಿ ರಾಷ್ಟ್ರದ ಪ್ರಗತಿಗೆ, ಫ್ಲೋರಿ ಕಲ್ಚರ್, ಸಿರಿಕಲ್ಚರ್, ಹಾರ್ಟಿಕಲ್ಚರ್ ಮತ್ತು ಫ್ರೂಟ್ ಕಲ್ಚರ್ ಇವೆಲ್ಲಕ್ಕೂ 10-20-50 ಎಕರೆ ಗಳಷ್ಟು ಜಮೀನು ಕಲ್ಪಿಸುವ ವಾತಾವರಣವುಂಟಾಗಿದ್ದರಿಂದ ಸದರಿ ಭೂ ಸುಧಾರಣಾ ಕಾಯ್ದೆಯ ಒಂದೆರಡು ಕಲಮುಗಳಿಗೆ ತಿದ್ದುಪಡಿ ಮಾಡಿದ್ದೇವೆಯೇ ಹೊರತು ಇಡೀ ಹಿಂದೂಸ್ತಾನ ದಲ್ಲಿಯೇ ಕರ್ನಾಟಕದವರು ಭೂ ಸುಧಾರಣೆಯನ್ನು ನಿರ್ನಾಮ ಮಾಡಿದ್ದಾರೆಂದು, ಏನೋ ಮಾಡಿಬಿಟ್ಟಿದ್ದಾರೆಂದು ಪ್ರತಿಭಟಿಸಿ ಧರಣಿ ಕುಳಿತುಕೊಂಡರು. ಇವರಿಗೆ ರಾಜಕೀಯ ಜೀವನ ದಲ್ಲಿ ಧರಣಿ ಹೇಗೆ ಮಾಡಬೇಕೆಂಬ ಅಭ್ಯಾಸ ಗೊತ್ತಿಲ್ಲ. ಧರಣಿ ಕುಳಿತುಕೊಳ್ಳುವುದಕ್ಕೂ ಸ್ವಲ್ಪ ಅಭ್ಯಾಸ ಮಾಡಬೇಕಾಗುತ್ತದೆ. ನಮ್ಮ 30 ವರ್ಷಗಳ ರಾಜಕೀಯ ಜೀವನದುದ್ದಕ್ಕೂ ನಾನು ಹಾಗೂ ಶ್ರೀಮಾನ್ ಜೆ. ಹೆಚ್. ಪಟೇಲರು ಕಾಂಗ್ರೆಸ್ ಪಕ್ಷದ ಸಿದ್ಧಾಂತಕ್ಕೆ ವಿರುದ್ಧವಾಗಿ ಹೋರಾಟ ಮಾಡಿಕೊಂಡು ಬಂದಂಥವರು. ಹೀಗೆ, ಯಾವ ರೀತಿ ಹೋರಾಟ ಮಾಡಿ ಕೊಂಡು ಬಂದಿದ್ದೇವೆಂದು ನಮಗೆ ಗೊತ್ತಿದೆ. ಇವರು ಪಾಪ ! ಕೆಂಗಲ್ ಹನುಮಂತಯ್ಯನವರ ಪ್ರತಿಮೆ ಮುಂದೆ ಧರಣಿ ಕುಳಿತುಕೊಳ್ಳಲು ಹೊರಟಿದ್ದಾರೆ. ಇರುವ ವಿಷಯವನ್ನು ನೇರವಾಗಿ ಜನರ ಮುಂದೆ ಮಾತನಾಡೋಣ. ಜನರ ಮುಂದೆ ಈ ವಿಷಯವನ್ನು ಇಡುತ್ತೇನೆ. ಇವೊತ್ತು ಇಡೀ ರಾಜ್ಯದ ಕೈಗಾರಿಕಾ ಪ್ರಗತಿಗೆ ಸಂಬಂಧಿಸಿದಂತೆ ಯಾವುದೇ ಕೈಗಾರಿಕೆ ಸ್ಥಾಪಿಸಲು ರಾಜ್ಯ ಸರ್ಕಾರ ಭೂಮಿಯನ್ನು ಮಂಜೂರು ಮಾಡುವಾಗ ಕೈಗಾರಿಕೆ ಸ್ಥಾಪನೆಗೆ ಎಷ್ಟು ಭೂಮಿಯ ಅಗತ್ಯವಿದೆಯೆಂಬುದನ್ನು ಪರಿಶೀಲಿಸಿ ಅವಶ್ಯಕವಾದಷ್ಟು ಭೂಮಿಯನ್ನು ಮಾತ್ರ ಮಂಜೂರು ಮಾಡಿಕೊಡುತ್ತೇವೆಯೇ ಹೊರತು ಭೂ ಸುಧಾರಣೆ ಕಾಯ್ದೆಯನ್ನು ಮಾತ್ರ ಮಂಜೂರು ಮಾಡಿಕೊಡುತ್ತೇವೆಯೇ ಹೊರತು ಭೂ ಸುಧಾರಣೆ ಕಾಯ್ದೆಯನ್ನು ರದ್ದುಗೊಳಿಸಿದ್ದೇವೆಂಬ ಒಂದು ತಪ್ಪು ಅಭಿಪ್ರಾಯವನ್ನು ರಾಜ್ಯದ ಮಹಾಜನತೆಯಲ್ಲಿ ಮೂಡಿಸುವುದಕ್ಕೆ ಏನು

ಹೊರಟಿದ್ದಾರೆ, ಇದಕ್ಕಿಂತ ಅಪ್ರಾಮಾಣಿಕ ರಾಜಕಾರಣ ಮತ್ತೊಂದಲ್ಲವೆಂದು ಹೇಳಬೇಕಾಗುತ್ತದೆ. ಶರದ್ ಪವಾರ್‌ರವರು ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದಾಗ ಏನು ಮಾಡಿದರೆ? ಅದೇ ರೀತಿ ಬೇರೆ ಬೇರೆ ರಾಜ್ಯಗಳಲ್ಲಿ ಏನೇನು ಮಾಡಿದ್ದಾರೆಂಬುದನ್ನು ತರಿಸಿಕೊಂಡು ನೋಡಲಿ. ಇವರುಗಳೇ ಏನೋ ಮಾಡಬೇಕೆಂದು ಒಂದು ಪ್ರಸ್ತಾವನೆ ಇಟ್ಟಿದ್ದರು. ಅದಕ್ಕೆ ಸಂಬಂಧಿತ ದಾಖಲಾತಿಗಳು ನಮ್ಮ ಕಂದಾಯ ಸಚಿವರ ಬಳಿ ಇದೆ. ಆದುದರಿಂದ, ಈ ರಾಜ್ಯದಲ್ಲಿ ಯಾವುದೇ ಕಾರಣದಿಂದಲೂ ಭೂ ಸುಧಾರಣೆ ಕಾಯ್ದೆಯನ್ನು ರದ್ದುಪಡಿಸುವ ಪ್ರಶ್ನೆಯೇ ಇಲ್ಲ. ಈ ದಿವಸ ಸದನ ಮುಕ್ತಾಯವಾಗುತ್ತಿದೆ. Let me clarify this position. ಇಷ್ಟು ವಿಷಯವನ್ನು ತಮ್ಮ ಮುಂದೆ ಹಾಗೂ ರಾಜ್ಯದ ಜನತೆಯ ಮುಂದೆ ನಿವೇದಿಸಿಕೊಂಡಿದ್ದೇನೆ. ಏಕೆಂದರೆ, ಇವೊತ್ತು ಸದನ ಮುಕ್ತಾಯವಾಗುತ್ತಿರುವುದರಿಂದ ಇದರಲ್ಲಿ ಯಾವುದೇ ರೀತಿಯ ಶಂಕೆ, ಸಂಶಯ ಬೇಡ. ಕೈಗಾರಿಕಾ ಪ್ರಗತಿ ದೃಷ್ಟಿಯಿಂದ ಮಾತ್ರ ನಾವು ಇಂತಹ ಕ್ರಮ ತೆಗೆದುಕೊಂಡಿದ್ದೇವೆಂದು ಮಾತನ್ನು ಹೇಳುತ್ತಾ, ಬೆಂಗಳೂರಿನ ಸುತ್ತ-ಮುತ್ತಲೂ ನಾಲ್ಕು ಸ್ಯಾಟಲೈಟ್ ಟೌನ್ ನಿರ್ಮಿಸಲು ತೀರ್ಮಾನಿಸಲಾಗಿದೆ. ಇದಕ್ಕಾಗಿ ಭೂಮಿ ಒದಗಿಸ ಬೇಕು, ಬಡವರಿಗೆ ಮನೆಗಳನ್ನು ಕಟ್ಟುವುದಕ್ಕೆ ಭೂಮಿ ಬೇಕಾಗುತ್ತದಾದ್ದರಿಂದ ನಾವು ಭೂಮಿ ಯನ್ನು ಅಗತ್ಯವಾಗಿ ಸ್ವಾಧೀನಪಡಿಸಿಕೊಳ್ಳಬೇಕಾಗುತ್ತದೆ. ಇವೊತ್ತು ಸುಮಾರು ನಾಲ್ಕು ಲಕ್ಷ ಮನೆಗಳ ನಿರ್ಮಾಣಕ್ಕಾಗಿ ಹಾಗೂ ನಿವೇಶನಗಳ ಹಂಚುವಿಕೆಗೆಂದು ಸರ್ಕಾರ 485 ಕೋಟಿ ರೂಪಾಯಿಗಳನ್ನು ಆಯ-ವ್ಯಯದಲ್ಲಿ ನಿಗದಿಪಡಿಸಿರುವಾಗ ಈ ಉದ್ದೇಶಕ್ಕಾಗಿ ನಾವು ಭೂಮಿ ಯನ್ನು ತೆಗೆದುಕೊಳ್ಳದಿದ್ದರೆ ಯೋಜನೆ ಅನುಷ್ಠಾನಗೊಳಿಸಲು ಹೇಗೆ ಸಾಧ್ಯವಾಗುತ್ತದೆ? ಆದು ದರಿಂದ, ಯಾವ ಉದ್ದೇಶಕ್ಕಾಗಿ ಎಷ್ಟು ಭೂಮಿಯ ಅವಶ್ಯಕತೆಯಿದೆಯೋ ಅಷ್ಟನ್ನು ಮಾತ್ರ ತೆಗೆದುಕೊಳ್ಳುವುದಕ್ಕೆ ಸರ್ಕಾರ ಸದರಿ ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ತಂದಿದೆಯೇ ಹೊರತು ತಿದ್ದುಪಡಿಯಲ್ಲಿ ಮತ್ತೇನೂ ಇಲ್ಲವೆಂದು ಮತ್ತೊಮ್ಮೆ ರಾಜ್ಯದ ಜನತೆಗೆ ಈ ಸದನದ ಮೂಲಕ ಸ್ಪಷ್ಟೀಕರಿಸಿ, ಸನ್ಮಾನ್ಯ ವಿರೋಧ ಪಕ್ಷದ ಮುಖಂಡರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಸರ್ಕಾರ ಮಾಡಿದಂಥ ತಪ್ಪನ್ನು ಹೇಳುವುದಕ್ಕೆ ಅವರಿಗೆ ಅಧಿಕಾರವಿದೆ. ಆದರೆ, ವಸ್ತುಸ್ಥಿತಿಗೆ ವಿರುದ್ಧವಾಗಿ ಜನರ ಮುಂದೆ ಹೋದಾಗ ಅದಕ್ಕೆ ಅವರಿಂದ ಮಾನ್ಯತೆ, ಹಾಗೂ ಪುರಸ್ಕಾರ ಎರಡೂ ಸಿಗುವುದಿಲ್ಲವೆಂಬ ಅರಿವು ಈಗಲಾದರೂ ಅವರಿಗೆ ಉಂಟಾಗಲೆಂದು ಪ್ರಾರ್ಥಿಸಿ 'ಗಂಗಾಜಲ'ದ ಬಗ್ಗೆ ಅವರು (ಬಿಜೆಪಿ) ಹೇಳಿದ್ದಾರೆ. ನಾನು ಪುಣ್ಯಕ್ಷೇತ್ರಗಳಿಗೆ ಹೋಗುತ್ತೇನೆ. ಆದರೆ, ಇಲ್ಲಿ ಗಂಗಾ ಜಲವನ್ನು ಪ್ಯಾಕೆಟ್‌ಗಳಲ್ಲಿ ತುಂಬಿ ಹಂಚುವ ಕಾರ್ಯ ಕ್ರಮ ಏನು ಹಮ್ಮಿಕೊಂಡಿದ್ದಾರೆ, ಇದರ ಬಗ್ಗೆ ನಾನು ವ್ಯಾಖ್ಯಾನಿಸಿದ್ದೇನೆ. ಇವರು ಹಂಚುವು ದಕ್ಕೆ ಹೊರಟಿರುವ ಗಂಗಾಜಲ.... ನಿನ್ನೆ ದಿವಸ ಇವರು ಗಣೇಶನಿಗೆ ಹಾಲು ಕುಡಿಸಿಬಿಟ್ಟರಂತೆ. ಗಂಗಾಜಲದ ಬಗ್ಗೆ ನಾನು ಏನು ಹೇಳಿದ್ದೇನೆ, ಅದನ್ನು ನಾನು ನನ್ನ ಹೆಂಡತಿಯ ಹತ್ತಿರ ಹೇಳಿದರೆ ಛೀಮಾರಿ ಹಾಕುತ್ತಾರೆಂದು ಯಡಿಯೂರಪ್ಪನವರು ಹೇಳಿರುವುದನ್ನು ಪತ್ರಿಕೆಯಲ್ಲಿ ಓದಿದೆ. ನನ್ನ ಹೆಂಡತಿ ದಿನವೂ ಗಣೇಶನನ್ನು ಪೂಜಿಸುತ್ತಾಳೆ. ನಿನ್ನೆ ದಿವಸ ನಮ್ಮ ಮನೆಯಲ್ಲಿದ್ದ ಗಣೇಶ ವಿಗ್ರಹಕ್ಕೆ ಹಾಲು ಕುಡಿಸಿದರೆ ಕುಡಿಯಲಿಲ್ಲ.

ಶ್ರೀ ಸಿ. ಬೈರೇಗೌಡ :- ನಮ್ಮ ಮನೆಯಲ್ಲಿ ಗಣೇಶನಿಗೆ ಹಾಲನ್ನು ಕುಡಿಸಲು ಬಹಳ ಪ್ರಯತ್ನಪಟ್ಟರು, ಆದರೆ ಅದೇಕೋ ಗಣೇಶ ಕೋಪ ಮಾಡಿಕೊಂಡು ಹಾಲನ್ನು ಕುಡಿಯಲಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ :- ಸದನದ ಮೂಲಕ ಮತ್ತೊಮ್ಮೆ ರಾಜ್ಯದ ಮಹಾಜನತೆಯಲ್ಲಿ ಕೈಮುಗಿದು ಪ್ರಾರ್ಥನೆ ಮಾಡುಕೊಳ್ಳುವುದೇನೆಂದರೆ, ನಮ್ಮ ದೇಶವು ಇಡೀ ಪ್ರಪಂಚದಲ್ಲಿ ತನ್ನದೇ ಆದಂಥ ಧಾರ್ಮಿಕ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಬೆಳೆದು ಬಂದಂಥ ದೇಶ. ಅನೇಕ ಸಂತರು ಹುಟ್ಟಿ ಬೆಳೆದಿರುವ ದೇಶ. ಆದರೆ ದುರಾದೃಷ್ಟವೇನೆಂದರೆ ಆಧುನಿಕ ರಾಜಕೀಯ ಸಂತರೇನಿದ್ದಾರೆ ಅವರು ಯಾವ ಮಟ್ಟಕ್ಕೆ ಹೋಗಿದ್ದಾರೆಂದರೆ, ಅದರ ಬಗ್ಗೆ ಲಘುವಾಗಿ ಬೇರೆ ದೇಶದ ಜನರು ಮಾತನಾಡಿಕೊಳ್ಳುವ ಮಟ್ಟಕ್ಕೆ ಹೋಗಿದೆ. ಬಿ.ಬಿ.ಸಿ. ಯಲ್ಲಿ ಇಂಥಹ ದೇಶದಲ್ಲಿ ಎಂಥ ಮುರ್ಖರಿದ್ದಾರೆ, ಕಲ್ಲು ವಿಗ್ರಹ ಹಾಲನ್ನು ಕುಡಿಯುತ್ತ ದೆಂದು ತೋರಿಸುತ್ತಾರಲ್ಲಾವೆಂದು ಆ ರೀತಿಯಾದ ಅಪಹಾಸ್ಯಕ್ಕೆ ಈ ದೇಶವನ್ನು ಈಡು ಮಾಡಿದರಲ್ಲವೆಂದು ನಮಗೆ ಚಿಂತನೆ. ಪಾರ್ಲಿಮೆಂಟ್ ಚುನಾವಣೆಯಲ್ಲಿ ಕೆಲವು ಓಟುಗಳನ್ನು ಪಡೆಯುವುದಕೋಸ್ಕರ ನಾವು ತಲೆತಗ್ಗಿಸಬೇಕಾದ ಕೆಲಸ ಮಾಡುತ್ತಿದ್ದಾರೆ. ಮಹಾರಾಷ್ಟ್ರದಲ್ಲಿ, ದೆಹಲಿಯಲ್ಲಿ ಕರ್ನಾಟಕದಲ್ಲಿ ಆ ರೀತಿ ಗಣೇಶ ಹಾಲನ್ನು ಕುಡಿದಿದೆಯೆಂದು ತೋರಿಸಿದ್ದಾರೆ. ಮಹಾರಾಷ್ಟ್ರದಲ್ಲಿ, ದೆಹಲಿಯಲ್ಲಿ, ಅವರ ಸರ್ಕಾರವಿದೆ, ನಮ್ಮ ಕರ್ನಾಟಕದಲ್ಲಿ ಅವರ ಸರ್ಕಾರ ಬರಬೇಕಾಗಿದೆ ಎಂದು ಅವರ ಭಾವನೆ ಇರಬಹುದು. ಈ ಮೂರು ರಾಜ್ಯಗಳಲ್ಲಿ ಗಣೇಶ ಹಾಲನ್ನು ಕುಡಿದಿದ್ದಾನೆ, ಯಡಿಯೂರಪ್ಪನವರ ಮನೆಯ ಪಕ್ಕದಲ್ಲಿ ಒಂದು ಗಣೇಶ ಹಾಲನ್ನು ಕುಡಿಯಿತಂತೆ, ಅದನ್ನು ನೋಡಲು ಜನರೆಲ್ಲರೂ ನೂಕುನುಗ್ಗಲಾಗಿದ್ದರಂತೆ. ಅವರು ಗಣೇಶನ ವಿಗ್ರಹದ ಹತ್ತಿರ ಹಾಲಿನ ಚಮಚಾವನ್ನು ಹಿಡಿದಕೊಂಡು ನಿಂತಿರುವ ಫೋಟೋವನ್ನು ಯಾವುದೋ ಪತ್ರಿಕೆಯವರು ತೋರಿಸಿದ್ದಾರೆ. ಹಾಲಿನ ತಟ್ಟೆ ಮತ್ತು ಚಮಚಾವನ್ನು ಗಣೇಶನ ಮೂತಿಯ ಹತ್ತಿರ ಹಿಡಿದುಕೊಂಡು ನಿಂತಿರುವುದನ್ನು ನಾನು ಯಾವುದೋ ಒಂದು ಪತ್ರಿಕೆಯಲ್ಲಿ ನೋಡಿದೆ. ನಾನು ಈ ಸದನದ ಮೂಲಕ ರಾಜ್ಯದ ಮಹಾಜನತೆಯಲ್ಲಿ ಕೈಮುಗಿದು ಕೇಳಿಕೊಳ್ಳುವುದೇನೆಂದರೆ ಇಂಥಹ ಆಧುನಿಕ ಸಂತರ ಕಪಟತ್ವವನ್ನು ರಾಜ್ಯದ ಜನತೆಯು ನಂಬಬಾರದು. ದಯಮಾಡಿ ಮೋಸಹೋಗಬಾರದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನೂರೊಂದು ರೂಪಾಯಿ, ಇಪ್ಪತ್ತೈದು ರೂಪಾಯಿ, ಸಾವಿರಾರು ರೂಪಾಯಿಗಳನ್ನು ಆ ಮೂಲಕ ಗಿಟ್ಟಿಸಿ ಮುಂದೆ ಬರತಕ್ಕ ಚುನಾವಣೆಯಲ್ಲಿ ನಮ್ಮ ಮೇಲೆ ಧಾಳಿಮಾಡುವುದಕ್ಕೆ ಈ ರಾಜ್ಯದ ಜನತೆಯ ಶೋಷಣೆ ಮಾಡುವ ಈ ವರ್ಗದ ಬಗ್ಗೆ ರಾಜ್ಯದ ಜನರು ಹುಷಾರಾಗಿರಬೇಕೆಂದು ಅವರಲ್ಲಿ ಕೈಮುಗಿದು ಪ್ರಾರ್ಥನೆ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಪ್ರಕಟಣೆ

ಅಧ್ಯಕ್ಷರು :- ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118 ರ ಮೇರೆಗೆ ದಿನಾಂಕ 22 ನೇ ಸೆಪ್ಟಂಬರ್, 1995 ರಂದು ಕರ್ನಾಟಕ ವಿಧಾನ ಪರಿಷತ್ತು ಈ ಕೆಳಕಂಡ ವಿಧೇಯಕಗಳಿಗೆ ಯಾವುದೇ ತಿದ್ದುಪಡಿಗಳಿಲ್ಲದೆ ಸಮ್ಮತಿ ನೀಡಿದೆಯೆಂದು ಈ ಮೂಲಕ ತಿಳಿಸುತ್ತೇನೆ.